ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಆನೇಕಲ್.

| | |
|---|---|
| ಸಿ.ಸಿ. ನಂ | **20615/2021** |
| ಪಿ.ಡಬ್ಲ್ಯೂ | **01** |
| ದಿನಾಂಕ | **10.02.2026** |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ಶ್ರೀ. ಎನ್.ಪಿ. ವಕೀಲರಿಂದ

ನಾನು 10 ನೇ ತರಗತಿವರೆಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನನ್ನ ಗಂಡ ಬಿಎಂಟಿಸಿಯಲ್ಲಿ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ನಮಗೆ ಒಬ್ಬ ಮಗಳು ಇದ್ದಾಳೆ. ಅವಳು ಡಿಪ್ಲೋಮಾ ವ್ಯಾಸಂಗ ಮಾಡಿರುತ್ತಾಳೆ. ನಾನು ಟೈಲರ್ ಕೆಲಸ ಮಾಡುತ್ತೇನೆ. ನಾನು ಚೀಟಿ ವ್ಯವಹಾರ ಹಾಗೂ ಪಿಗ್ಮಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. 8-9 ವರ್ಷಗಳ ಹಿಂದೆ ನನ್ನ ಗಂಡ ನಿವೃತ್ತರಾಗಿರುತ್ತಾರೆ. ನನ್ನ ಗಂಡನಿಗೆ ಪಿಂಚಣಿ ಬರುತ್ತದೆ, ಅದು ಎಷ್ಟು ಎಂದು ನನಗೆ ಗೊತ್ತಿಲ್ಲ. ನಮಗೆ ತಿಂಗಳಿಗೆ ಬಾಡಿಗೆ ರೂ.80,000/- ಬರುತ್ತದೆ. ಬಾಡಿಗೆ ಮನೆಗಳು ಜಿಗಣಿಯಲ್ಲಿ ಇವೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡುತ್ತೇವೆ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಲಾಗಿ, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು
ಆನೇಕಲ್.